ಶರಣಾಗದೆ ಹೋರಾಡಿ ಹುತಾತ್ಮರಾದರು. ಸೈನಿಕರು ಸ್ವರ್ಣ ದೇವಾಲಯದಲ್ಲಿದ್ದ ಅಪಾರ ಸಂಖ್ಯೆಯ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡರು. ಇದು ಸಿಖ್ ದೇವ ಮಂದಿರ ಅಖಾಲ್ ತಖ್ತ್‌ಗೆ ನಷ್ಟ ಉಂಟುಮಾಡಿತು. ಕಾರಣ ಪೊಲೀಸರು ಗುರುದ್ವಾರಗಳಿಗೆ ಪ್ರವೇಶಿಸುವಂತಿರಲಿಲ್ಲ. ಸೈನಿಕ ಕಾರ್ಯಾಚರಣೆಯಿಂದಾಗಿ ಸ್ವರ್ಣ ದೇವಾಲಯದ ಪಾವಿತ್ರ್ಯತೆಗೆ ಧಕ್ಕೆಯಾಗಿದೆ ಎಂದು ಭಾವಿಸಿದ ಸಿಖ್‌ರು ಪ್ರಧಾನಿಯನ್ನು ದ್ವೇಷಿಸಿದರು. ಕೊನೆಗೆ ಅದು ಇಂದಿರಾ ಕೊಲೆಯೊಂದಿಗೆ ಅಂತ್ಯಗೊಂಡಿತು.

### ಅಕ್ಟೋಬರ್ 31, 1984

ಆ ದಿನ ಇಡೀ ರಾಷ್ಟ್ರ ಶೋಕ ಸಾಗರದಲ್ಲಿ ಮುಳಗಿತು. ಜಗತ್ತು ಕಂಬನಿ ಇಟ್ಟಿತು. ರಾಷ್ಟ್ರವೇ ಸ್ತಬ್ಧವಾಯಿತು. ಅಂದು ಇಂದಿರಾರ ರಕ್ಷಣಾ ದಳದಲ್ಲಿದ್ದ ಬಿಯಾಂತ್ ಸಿಂಗ್‌ಮತ್ತು ಸತ್ವಂತ್ ಸಿಂಗ್ ಗುಂಡುಹಾರಿಸಿ ಇಂದಿರಾಗಾಂಧಿಯನ್ನು ಕೊಲೆ ಮಾಡಿದ್ದರು. ಅವರಂತಹ ಚೈತನ್ಯಶೀಲ ನಾಯಕತ್ವ ರಾಷ್ಟ್ರಕ್ಕೆ ಬೇಕಿದ್ದಾಗಲೇ ಆದ ಈ ದುರಂತ ರಾಷ್ಟ್ರಕ್ಕೆ ಭರಿಸಲಾಗದ ನಷ್ಟವನ್ನುಂಟು ಮಾಡಿತು. ಅವರ ಅಂತ್ಯಕ್ರಿಯೆಯಲ್ಲಿ ಅನೇಕ ಜಗತ್ತಿನ ಗಣ್ಯರು ಭಾಗವಹಿಸಿದ್ದರು. ಇಂದಿರಾಗೆ ಬಿಬಿಸಿಯ ಮಹಿಳಾ ಮಿಲೆನಿಯಂ ಪ್ರಶಸ್ತಿ ದೊರೆತಿದೆ.

Scanned with CamScanner

12 ಕೃತಿಗಳು : ಬುದ್ಧ ಹಾಗೂ ಬೌದ್ಧ ಧರ್ಮ, ಬುದ್ಧ ಮತ್ತು ಕಾರ್ಲ್‌ಮಾರ್ಕ್ಸ್, ಕಾಂಗ್ರೆಸ್ ಮತ್ತು ಗಾಂಧಿ ಅಸ್ಪೃಶ್ಯರಿಗೆ ಏನು ಮಾಡಿದರು?, ಶೂದ್ರರು ಯಾರು? ಥಾಟ್ಸ್ ಆಫ್ ಪಾಕಿಸ್ತಾನ್, ಜಾತಿ ವಿಶ್ಲೇಷಣೆ, ರೂಪಾಯಿ ಸಮಸ್ಯೆ ಇವು ಅಂಬೇಡ್ಕರ್ ಸಾಹಿತ್ಯಕ್ಕೆ ನೀಡಿದ ಕೊಡುಗೆಗಳು.

ಪ್ರಶಸ್ತಿಗಳು

1952ರಲ್ಲಿ ಅಮೆರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಎಲ್. ಪದವಿ ನೀಡಿತು. ಆಂಧ್ರದ ಉಸ್ಮಾನಿಯಾ ವಿಶ್ವವಿದ್ಯಾಲಯ ಗೌರವ ಡಿ.ಲಿಟ್ ಪದವಿ ನೀಡಿತು. ಭಾರತ ಸರಕಾರ ಅಂಬೇಡ್ಕರ್ ಅವರಿಗೆ 1989ರಲ್ಲಿ ಮರಣೋತ್ತರ ಭಾರತರತ್ನ ಪ್ರಶಸ್ತಿ ನೀಡಿ ಗೌರವಿಸಿತು.

## 2. ಇಂದಿರಾ ಗಾಂಧಿ (1917–1984)

20ನೇ ಶತಮಾನದಲ್ಲಿ ಜಗತ್ತು ಕಂಡ ಶ್ರೇಷ್ಠ ರಾಜಕಾರಣಿಗಳಲ್ಲಿ ಶ್ರೀಮತಿ ಇಂದಿರಾಗಾಂಧಿ ಒಬ್ಬರು. 'ಉಕ್ಕಿನ ಮಹಿಳೆ' ಎಂದೇ ಹೆಸರಾಗಿದ್ದ ಇಂದಿರಾ ಭಾರತೀಯರ ಕಣ್ಮಣಿ, ಅಚ್ಚು ಮೆಚ್ಚಿನ ಮಹಿಳೆ ಮತ್ತು 'ಪ್ರಿಯದರ್ಶಿನಿ' ಎಂದು ಪ್ರಸಿದ್ಧಿ ಪಡೆದಿದ್ದರು. ಇಂದಿರಾ 1917ರ ನವೆಂಬರ್ 19ರಂದು ಅಲಹಾಬಾದಿನ ಆನಂದಭವನದಲ್ಲಿ ಜನಿಸಿದರು. ತಂದೆ ಭಾರತದ ಮೊದಲ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರು. ತಾಯಿ ಕಮಲಾ ನೆಹರು. ಇಂದಿರಾರದು ದೇಶದಲ್ಲೇ ಅತ್ಯಂತ ಪ್ರತಿಷ್ಠಿತ ಹಾಗೂ ಸುಸಂಸ್ಕೃತ ಕುಟುಂಬ. ನೆಹರೂರ ಏಕಮಾತ್ರ ಪುತ್ರಿಯಾಗಿ, ಅಜ್ಜಿ ಸ್ವರೂಪರಾಣಿ (ದೋಲ್‌ಅಮ್ಮಾ) ಯ ಅಕ್ಕರೆಯಲ್ಲಿ ಬೆಳೆದರು. ಇಂದಿರಾರ ಆರಂಭ ಶಿಕ್ಷಣ ಪೂನಾದ ಶಾಂತಿನಿಕೇತನ ಹಾಗೂ ಸ್ವಿಟ್ಜರ್‌ಲ್ಯಾಂಡಿನ ಇಂಟರನ್ಯಾಷನಲ್ ಸ್ಕೂಲ್‌ಗಳಲ್ಲಾಯಿತು. ನಂತರ ಲಂಡನ್ನಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದರು. 1942ನೇ ಮಾರ್ಚ್ 26ರಂದು ಇಂದಿರಾ ತಾನು ಪ್ರೀತಿಸಿದ ಫಿರೋಜ್ ಗಾಂಧಿಯನ್ನು ವಿವಾಹವಾದರು. ಅವರಿಂದ ಮೊದಲ ಮಗ ರಾಜೀವ್ ಗಾಂಧಿ (ಆಗಸ್ಟ್ 20, 1944) ಹಾಗೂ ಸಂಜಯ್ ಗಾಂಧಿ (ಜನವರಿ 14, 1946)ಯವರನ್ನು ಪಡೆದರು.


ಇಂದಿರಾಗಾಂಧಿ

ಚಿಕ್ಕ ವಯಸ್ಸಿನಲ್ಲೇ ದೇಶಾಭಿಮಾನ ಹೊಂದಿದ್ದ ಇಂದಿರಾ ದೇಶ ಸೇವೆಗೆಂದು 1930ರಲ್ಲಿ ವಾನರ ಸೇನೆ ಎಂಬ 6,000 ಸ್ವಯಂ ಸೇವಕರ ಸಂಘವನ್ನು ಕಟ್ಟಿದರು. ಗಾಂಧೀಜಿ ಆರಂಭಿಸಿದ್ದ ಸ್ವದೇಶಿ ಚಳುವಳಿ, ಉಪ್ಪಿನ ಸತ್ಯಾಗ್ರಹ ಮತ್ತು ಕ್ವಿಟ್ ಇಂಡಿಯಾ ಚಳುವಳಿಗಳಲ್ಲಿ ಭಾಗವಹಿಸಿ ಹಲವು ಬಾರಿ ಜೈಲು ಶಿಕ್ಷೆ ಅನುಭವಿಸಿದರು. 1955ರಲ್ಲಿ AICCಯ ಸದಸ್ಯೆಯಾದರು. 1956ರಲ್ಲಿ

Scanned with CamScanner

ಅಲಹಾಬಾದ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷೆಯಾದರು. 1959ರಲ್ಲಿ AICC ಯ ಅಧ್ಯಕ್ಷರಾದರು. 1960ರಲ್ಲಿ ಇಂದಿರಾಗೆ ಪತಿ ವಿಯೋಗವಾಯಿತು. ಅವರು ಲಾಲ್‌ಬಹದ್ದೂರ್ ಶಾಸ್ತ್ರಿಯವರ ಸಚಿವ ಸಂಪುಟದಲ್ಲಿ ವಾರ್ತಾ ಮತ್ತು ಪ್ರಚಾರ ಇಲಾಖೆಯ ಮಂತ್ರಿಯಾದರು. ನಂತರ 1966ರಲ್ಲಿ ಭಾರತದ ಪ್ರಥಮ ಮಹಿಳಾ ಪ್ರಧಾನ ಮಂತ್ರಿಯಾಗಿ ಆಯ್ಕೆಯಾದರು. 1977-80ರ ಜನತಾ ಪಕ್ಷದ ಮೂರು ವರ್ಷಗಳು ಹೊರತಾಗಿ 1984ರ ತನ್ನ ಹತ್ಯೆಯವರೆಗೂ ಪ್ರಧಾನಿಯಾಗಿ 16 ವರ್ಷ ದೀರ್ಘ ಆಳ್ವಿಕೆ ಮಾಡಿದರು.ಜೂನ್ 25, 1975ರಲ್ಲಿ ಅಧಿಕಾರದಲ್ಲಿ ಮುಂದುವರೆಯಲು ತುರ್ತು ಪರಿಸ್ಥಿತಿಯನ್ನು ಘೋಷಿಸಿದ ಪರಿಣಾಮವಾಗಿ 1977ರ ಚುನಾವಣೆಯಲ್ಲಿ ಸೋತರು. ಇಂದಿರಾ ಅಕ್ಟೋಬರ್ 31, 1984ರಂದು ಹಂತಕರ ಗುಂಡಿಗೆ ಬಲಿಯಾದರು. ದೆಹಲಿಯ ಅವರ ಸಮಾಧಿಯನ್ನು ಶಕ್ತಿ ಸ್ಥಳ ಎಂದು ಕರೆಯಲಾಗಿದೆ. ಇಂದಿರಾಗೆಭಾರತರತ್ನ ಪ್ರಶಸ್ತಿ ಲಭಿಸಿದೆ. ಸ್ವಾತಂತ್ರ್ಯೋತ್ತರ ಭಾರತದ ಇತಿಹಾಸದಲ್ಲಿ ಇಂದಿರಾ ಹೆಸರು ಸುವರ್ಣಾಕ್ಷರದಲ್ಲಿ ಬರೆದಿಡಲು ಅರ್ಹವಾಗಿದೆ.

## ಪ್ರಧಾನಿಯಾಗಿ ಇಂದಿರಾ ಗಾಂಧಿಯ ಸಾಧನೆಗಳು

ಭಾರತದ ಪ್ರಧಾನಿಯಾಗಿ ಇಂದಿರಾರ ಪ್ರಮುಖ ಸಾಧನೆಗಳು ಕೆಳಗಿನಂತಿವೆ.

### 1. ಭಾರತ-ರಷ್ಯಾ ಒಪ್ಪಂದ

1971 ರ ಆಗಸ್ಟ್ 9ರಂದು ರಷ್ಯಾಗೆ ಭೇಟಿ ಕೊಟ್ಟ ಇಂದಿರಾ ರಷ್ಯಾದೊಡನೆ ಮೈತ್ರಿ ಮತ್ತು ಸಹಕಾರ ಒಪ್ಪಂದ ಮಾಡಿಕೊಂಡರು. ಇದು ಒಂದು ರಕ್ಷಣಾತ್ಮಕ ಒಪ್ಪಂದವೂ ಆಗಿತ್ತು. ಇಷ್ಟಾದರೂ ತಂದೆಯ ಅಲಿಪ್ತ ನೀತಿಯನ್ನು ಬಿಟ್ಟು ಕೊಡಲಿಲ್ಲ. ಅಮೆರಿಕಾ ಮತ್ತು ಚೀನಾಗಳು ಪಾಕಿಸ್ತಾನ್‌ಗೆ ಬೆಂಬಲ ನೀಡಿದ್ದು ಈ ಒಪ್ಪಂದಕ್ಕೆ ಕಾರಣವಾಗಿತ್ತು.

### 2. ಇಂಡೋ-ಪಾಕ್ ಯುದ್ಧ ಮತ್ತು ಬಾಂಗ್ಲಾ ದೇಶದ ಉದಯ

ಪೂರ್ವ ಪಾಕಿಸ್ತಾನ (ಬಾಂಗ್ಲಾ ದೇಶ) 1971ರವರೆಗೂ ಪಶ್ಚಿಮ ಪಾಕಿಸ್ತಾನದ ಕರಿ ನೆರಳಿನಲ್ಲೇ ಬದುಕುತ್ತಿತ್ತು. 1970ರಲ್ಲಿ ಆದ ಚುನಾವಣೆಗಳಲ್ಲಿ ಅವಾಮಿ ಲೀಗ್‌ನ ಷೇಖ್ ಮುಜಿಬುರ್ ರೆಹಮಾನ್ ಜಯಗಳಿಸಿದರು. ಪ್ರಧಾನಿಯಾಗಲಿದ್ದ ಅವರು ಬಾಂಗ್ಲಾಗೆ ಹೆಚ್ಚಿನ ಸ್ವಯಂ ಆಡಳಿತ ಕೇಳಿದರು. ಇದು ಬಾಂಗ್ಲಾದೇಶದ ಪ್ರತ್ಯೇಕತೆಗೆ ಕಾರಣವಾಗುವುದೆಂದು ಭಾವಿಸಿದ ಪಶ್ಚಿಮ ಪಾಕಿಸ್ತಾನದ ಅಧ್ಯಕ್ಷ ಯಾಹ್ಯಾಖಾನ್ ಮತ್ತು ಪ್ರಧಾನಿ ಜುಲ್ಫಿಕಾರ್ ಆಲಿ ಭುಟ್ಟೋ ಮುಜಿಬುರನ್ನು ಬಂಧಿಸಿ ಅವಾಮಿ ಲೀಗ್ ಪಕ್ಷವನ್ನು ಬಹಿಷ್ಕರಿಸಿದರು. ಅಲ್ಲದೆ ಬಾಂಗ್ಲಾದಲ್ಲಿ ತನ್ನ ಕರಾಳ ಆಳ್ವಿಕೆ ಆರಂಭಿಸಿ ಸೈನಿಕ ಕಾರ್ಯಾಚರಣೆ ಮೂಲಕ ತನ್ನ ವಿರೋಧಿಗಳನ್ನು ಬಂಧಿಸಿತು. ಪಾಕಿಸ್ತಾನ ಬಾಂಗ್ಲಾ ಜನತೆಯ ಕೊಲೆ, ಸುಲಿಗೆ, ಹಿಂಸೆಗಳಿಂದ ರಕ್ತಪಾತ ಹರಿಸಿತು. ಇದರಿಂದ ಭೀತರಾದ ಜನರು ಪ್ರವಾಹ ರೀತಿಯಲ್ಲಿ 1 ಕೋಟಿ ನಿರಾಶ್ರಿತರು ಬಾಂಗ್ಲಾವನ್ನು ತೊರೆದು ಭಾರತಕ್ಕೆ ಬಂದರು. ಭಾರತವು ಮಾನವೀಯ ದೃಷ್ಟಿಯಿಂದ ನಿರಾಶ್ರಿತರಿಗೆ ಸಹಾಯ ಹಸ್ತ ನೀಡಿ ಆಶ್ರಯ ನೀಡಿತು. ಈ ತಪ್ಪಿಗೆ ಪಾಕಿಸ್ತಾನ ಭಾರತದ ಮೇಲೆ ಡಿಸೆಂಬರ್ 3, 1971 ರಂದು ಯುದ್ಧ ಸಾರಿತು. ಯುದ್ಧವು 14 ದಿನಗಳಲ್ಲೇ ಮುಕ್ತಾಯವಾಯಿತು. ಡಿಸೆಂಬರ್ 16ರಂದು ಸೋತ ಪಾಕ್ ಸೇನಾನಿ ನಿಯಾಜಿ ಢಾಕಾದಲ್ಲಿ ಭಾರತಕ್ಕೆ ಶರಣಾದರು. ಸೋತ ಪಾಕಿಸ್ತಾನ ಬಾಂಗ್ಲಾ ದೇಶಕ್ಕೆ ಸ್ವಾತಂತ್ರ್ಯ ನೀಡಿತು. ಈ ಶ್ರೇಯಸ್ಸು ಇಂದಿರಾಗೆ ಸಲ್ಲಬೇಕು. ಇಷ್ಟಾದರೂ ಪಾಕ್ ಭಾರತವನ್ನು ಕಚ್ಚುವ ತನ್ನ ಹಳೇ ಚಾಳಿಯನ್ನು ಬಿಟ್ಟಿಲ್ಲ.

Scanned with CamScanner

3. ಸಿಮ್ಲಾ ಒಪ್ಪಂದ (1972)

ಸಿಮ್ಲಾ ಸಮ್ಮೇಳನದಲ್ಲಿ ಇಂದಿರಾಗಾಂಧಿ ಮತ್ತು ಪಾಕ್ ಪ್ರಧಾನಿ ಭುಟ್ಟೋ ಐತಿಹಾಸಿಕ ಸಿಮ್ಲಾ ಒಪ್ಪಂದಕ್ಕೆ ಸಹಿ ಹಾಕಿದರು (ಜುಲೈ 3, 1972). ಒಪ್ಪಂದದಂತೆ ಉಬಯ ರಾಷ್ಟ್ರಗಳು ತಮ್ಮ ಪ್ರಾದೇಶಿಕ ಸಮಗ್ರತೆ ಮತ್ತು ರಾಜಕೀಯ ಸ್ವಾತಂತ್ರ್ಯವನ್ನು ಗೌರವಿಸಲು ಒಪ್ಪಿದವು. ಇಂಡೋ ಪಾಕ್ ಯುದ್ಧದ ಮುನ್ನ ಇದ್ದ ಅಂತರರಾಷ್ಟ್ರೀಯ ಗಡಿಗೆ ಮರಳಿದವು. ಕಾಶ್ಮೀರ್ ಸಮಸ್ಯೆಯನ್ನು ದ್ವಿಪಕ್ಷೀಯ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಲು ಒಪ್ಪಿದವು. ಇದು ಇಂದಿರಾರ ರಾಜತಾಂತ್ರಿಕ ಯಶಸ್ಸು ಆಗಿದ್ದು ಅವರ ರಾಜಕೀಯ ಪ್ರಭುದ್ಧತೆಗೆ ಉತ್ತಮ ನಿದರ್ಶನ. ಇಂಡೋ ಪಾಕ್ ಸಂಬಂಧ ಸುಧಾರಣೆಯಲ್ಲಿ ಇದೊಂದು ಮೈಲಿಗಲ್ಲು.

4. ಶ್ರೀಲಂಕಾ, ನೇಪಾಳಗಳೊಡನೆ ಸಂಬಂಧ

1983ರಲ್ಲಿ ಶ್ರೀಲಂಕಾದ ಅಧ್ಯಕ್ಷ ಜಯವರ್ಧನೆಯವರನ್ನು ಭೇಟಿಯಾಗಿ ಶ್ರೀಲಂಕಾದಲ್ಲಿ ತಮಿಳು ನಾಗರಿಕರಿಗೆ ಮೂಲಭೂತ ಸೌಲಭ್ಯ ಕಲ್ಪಿಸುವ ಮಾತುಕತೆ ಮಾಡಿ ಯಶಸ್ವಿಯಾದರು. ಶ್ರೀಲಂಕಾದ ಐಕ್ಯತೆ ಮತ್ತು ಸಮಗ್ರತೆಗಳನ್ನು ತಾವು ಗೌರವಿಸುವುದಾಗಿ ಹೇಳಿದರು. ಅದೆ ರೀತಿ 1984ರಲ್ಲಿ ನೇಪಾಳದ ಪ್ರಗತಿಯ ದೃಷ್ಠಿಯಿಂದ ಇಂಡೋನೇಪಾಳೀಸ್ ಜಾಯಿಂಟ್ ಕಮೀಷನ್ ಅನ್ನು ಸ್ಥಾಪಿಸಿದರು.

5. ಭಾಷಾವಾರು ಪ್ರಾಂತ್ಯಗಳ ಪೂರ್ಣತೆ

ಇಂದಿರಾಗಾಂಧಿ ಅವರ ಅಧಿಕಾರಾವಧಿಯಲ್ಲಿ ಗುಜರಾತಿನಿಂದ ಮಹಾರಾಷ್ಟ್ರ, ಪಂಜಾಬಿನಿಂದ ಹರ್ಯಾಣ ರಾಜ್ಯಗಳನ್ನು ಪ್ರತ್ಯೇಕಿಸಲಾಯಿತು. ಗೋವಾ, ಡಿಯು, ಡಾಮನ್, ನಾಗಾಲ್ಯಾಂಡ್, ಸಿಕ್ಕಿಂ (36ನೇ ಸಂವಿಧಾನ ತಿದ್ದುಪಡಿ ಅನ್ವಯ)ಗಳಿಗೆ ಪ್ರತ್ಯೇಕ ರಾಜ್ಯದ ಸ್ಥಾನಮಾನ ಕಲ್ಪಿಸಲಾಯಿತು. ಇದರಿಂದಾಗಿ ಭಾರತದಲ್ಲಿ ಅಳಿದುಳಿದ ಭಾಷಾವಾರು ಪ್ರಾಂತ್ಯಗಳ ರಚನೆ ಪೂರ್ಣಗೊಂಡಂತಾಯಿತು.

6. 20 ಅಂಶಗಳ ಕಾರ್ಯಕ್ರಮ

1969ರ ಜುಲೈ 30ರಂದು 20 ಅಂಶಗಳ ಕಾರ್ಯಕ್ರಮವನ್ನು ಪ್ರಕಟಿಸಿದರು. ಸದೃಢ ರಾಷ್ಟ್ರ ನಿರ್ಮಾಣಕ್ಕೆ ಅವು ನೆರವಾದವು. ಜೊತೆಗೆ ಪಂಚಾಯತ್ ರಾಜ್ಯ ಅನುಷ್ಠಾನ, 1000 ರೂ. ನೋಟುಗಳ ರದ್ದು, ತೆರಿಗೆಗಳ್ಳರ ದಮನ. ಕಳ್ಳ ವ್ಯಾಪಾರ ನಿಯಂತ್ರಣ, ಸಾರ್ವಜನಿಕ ಉದ್ದಿಮೆಗಳ ವಿಸ್ತರಣೆ ಇವೇ ಮೊದಲಾದ ಪ್ರಗತಿಪರ ಕಾರ್ಯಗಳನ್ನು ಹಮ್ಮಿಕೊಂಡರು.

7. ಬ್ಯಾಂಕುಗಳ ರಾಷ್ಟ್ರೀಕರಣ

1969ರಲ್ಲಿ 14 ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿದರು. ಇದು ಇಂದಿರಾರ ಕ್ರಾಂತಿಕಾರಿ ಸುಧಾರಣೆಯಾಗಿದೆ. ಅದೇ ರೀತಿ 106 ಜನರಲ್ ಇನ್ಶೂರೆನ್ಸ್ ಕಂಪನಿಗಳು, ಕಲ್ಲಿದ್ದಲು ಕಂಪನಿಗಳು, ಇಂಡಿಯನ್ ಆಯಿಲ್ ಕಂಪನಿಗಳು ರಾಷ್ಟ್ರೀಕರಣಗೊಂಡವು. ಬಿ.ಎಚ್.ಇ.ಎಲ್, ಮಾರುತಿ ಉದ್ಯೋಗ್ ಲಿಮಿಟೆಡ್ ಹಾಗು ತಾರಾಪುರ ಮತ್ತು ಕಲ್ಪಕಂ ಅಣು ಶಕ್ತಿ ಕೇಂದ್ರಗಳನ್ನು ಸ್ಥಾಪಿಸಿದರು.

8. ಗರೀಬಿ ಹಟಾವೋ

ಇಂದಿರಾಗಾಂಧಿ ಬಡತನ ನಿರ್ಮೂಲನೆಗೆ ಗರೀಬಿ ಹಟಾವೋ ಘೋಷಣೆಯನ್ನು ಹೊರಡಿಸಿದರು. ಇದು ಅವರಿಗೆ ಹೆಚ್ಚಿನ ಜನಪ್ರಿಯತೆ ತಂದುಕೊಟ್ಟಿತು. ಅದರನ್ವಯ ಭೂ ಸುಧಾರಣಾ ಕಾಯಿದೆಗಳನ್ನು ಜಾರಿಗೆ ತಂದು ಉಳುವವನೇ ಭೂಮಿಯ ಒಡೆಯನಾಗಿ ಮಾಡಿದರು.

Scanned with CamScanner

ಭೂ ಹಿಡುವಳಿಗಳ ಮೇಲೆ ನಿರ್ಬಂಧ ಹೇರಲಾಯಿತು. ಇವೆಲ್ಲ ಅವರ ಸಮಾಜವಾದಿ ಪ್ರಗತಿಪರ ಚಿಂತನೆಗೆ ದ್ಯೋತಕವಾಗಿವೆ. ಇಂದಿರಾಗೆ ಬಡವರ, ದೀನದಲಿತರ ಬಗ್ಗೆ ತುಂಬಾ ಕಾಳಜಿ ಇದ್ದಿತು.

### 9. ರಾಜಧನ ರದ್ಧತಿ

1970ರಲ್ಲಿ ಮಾಜಿ ರಾಜರಿಗೆ ಕೊಡುತ್ತಿದ್ದ ರಾಜಧನ ಮತ್ತು ವಿಶೇಷ ಸವಲತ್ತುಗಳನ್ನು ರದ್ದುಪಡಿಸಿದರು. ಅಲ್ಲಿಗೆ ಅಳಿದುಳಿದ ರಾಜಷಾಹಿ ಕಣ್ಮರೆಗೊಂಡಿತು.

### 10. 42ನೇ ಸಂವಿಧಾನ ತಿದ್ದುಪಡಿ

ಸಂವಿಧಾನಕ್ಕೆ 1976ರಲ್ಲಿ 42ನೇ ತಿದ್ದುಪಡಿ ಮಾಡಿ ಪರಮಾಧಿಕಾರ ಪ್ರಜಾಸತ್ತಾತ್ಮಕ ಗಣರಾಜ್ಯವಾದ ಭಾರತವನ್ನು ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಮಾರ್ಪಡಿಸಿದರು. 1967ರಲ್ಲಿ ಜಾರಿಗೆ ಬಂದ ಅಧಿಕೃತ ಭಾಷಾ ತಿದ್ದುಪಡಿ ಕಾಯಿದೆ ಹಿಂದಿಯೇತರರಿಗೆ ಹಿಂದಿ ಜೊತೆಗೆ ಇಂಗ್ಲಿಷನ್ನು ಸಂಪರ್ಕ ಭಾಷೆಯಾಗಿ ಬಳಸುವ ಅವಕಾಶ ಕಲ್ಪಿಸಿದರು.

### 11. ಅಣ್ವಸ್ತ್ರ ಸ್ಫೋಟ, ಬಾಹ್ಯಾಕಾಶ ಶೋಧ

1974ರ ಮೇ 18ರಂದು ಭಾರತ ರಾಜಸ್ತಾನಿನ ಪೊಕ್ರಾನ್‌ನಲ್ಲಿ ಪ್ರಪ್ರಥಮ ಭೂಗತ ಅಣು ಅಸ್ಫೋಟ ಮಾಡಿ ವಿಶ್ವದ ಕೆಲವೇ ಅಣ್ವಸ್ತ್ರ ರಾಷ್ಟ್ರಗಳ ಸಾಲಿಗೆ ಸೇರಿಕೊಂಡಿತು. ಭಾರತದ ಶಕ್ತಿ ಸಾಮರ್ಥ್ಯ ಎಷ್ಟೆಂದು ಇಡೀ ಜಗತ್ತಿಗೆ ಅರಿವಾಯಿತು. ಭಾರತವು ಬಲಿಷ್ಠ ರಾಷ್ಟ್ರವೆಂದು ಇದು ದೃಢ ಪಡಿಸಿತು. ಅಮೆರಿಕಾ ಮತ್ತು ಚೀನಾಗಳ ಕಣ್ಣುಗಳು ಕೆಂಪಗಾದವು. ಪಾಕಿಸ್ತಾನಕ್ಕಂತೂ ಇದು ನುಂಗಲಾರದ ತುತ್ತಾಯಿತು. 1984ರಲ್ಲಿ ರಾಕೇಶ್‌ಶರ್ಮ ರಷ್ಯಾ ಜತೆಗೂಡಿ ಗಗನ ಯಾತ್ರೆ ಕೈಗೊಂಡು ಬಾಹ್ಯಾಕಾಶ ಸಂಶೋಧನೆಯಲ್ಲಿ ವಿನೂತನ ದಾಖಲೆ ಸ್ಥಾಪಿಸಿದರು. ಇನ್ಸಾಟ್ 1ಎ, ಆರ್ಯಭಟ ಉಪಗ್ರಹಗಳು ಉಡಾವಣೆಯಾದವು.

### 12. ಆಪರೇಷನ್ ಬ್ಲೂಸ್ಟಾರ್ ಮತ್ತು ಇಂದಿರಾ ಗಾಂಧಿಯ ಹತ್ಯೆ

ಸಿಖ್ ಉಗ್ರಗಾಮಿಗಳು ಪಂಜಾಬಿನಲ್ಲಿ ತಮಗೆ ಪ್ರತ್ಯೇಕ ರಾಜ್ಯ ಬೇಕೆಂದು ಒತ್ತಾಯಿಸಿ ಖಲಿಸ್ತಾನ್ ಚಳುವಳಿ ಹೂಡಿದರು. ಅಕಾಲಿ ದಳ ಪಕ್ಷ ಅದರ ನೇತೃತ್ವ ವಹಿಸಿತ್ತು. ಹರಚರಣ್ ಸಿಂಗ್ ಲೋಂಗೊವಾಲ್ (ಮಂದಗಾಮಿ) ಮತ್ತು ಜರ್ನೈಲ್ ಸಿಂಗ್ ಬಿಂದ್ರನ್ ವಾಲೆ (ತೀವ್ರಗಾಮಿ)ಯರು ಅದರ ನಾಯಕತ್ವ ವಹಿಸಿದ್ದರು. ಹರ್ಯಾಣ ಮತ್ತು ರಾಜಾಸ್ತಾನದ ಕೆಲವು ಭಾಗಗಳನ್ನು ಕೂಡಿಸಿ ಪ್ರತ್ಯೇಕ ಖಲಿಸ್ತಾನ್ ರಾಷ್ಟ್ರ ಸ್ಥಾಪಿಸುವುದು ಅವರ ಬೇಡಿಕೆಯಾಗಿತ್ತು. ಖಲಿಸ್ತಾನ್ ರಚನೆಗೆ ಅವಕಾಶ ಕೊಟ್ಟಲ್ಲಿ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಧಕ್ಕೆ ಉಂಟಾಗುವುದೆಂದು ಇಂದಿರಾ ಸಿಖ್‌ರ ಬೇಡಿಕೆಯನ್ನು ತಿರಸ್ಕರಿಸಿದರು. ಇದು ಸಿಖ್ಖರ ಕೋಪಕ್ಕೆ ಕಾರಣವಾಯಿತು. ಅವರು ತಮ್ಮ ಗುರುದ್ವಾರಗಳನ್ನು ಅಡಗುತಾಣಗಳಾಗಿ ಮಾಡಿಕೊಂಡು ಶಸ್ತ್ರಾಸ್ತ್ರಗಳನ್ನಿಟ್ಟುಕೊಂಡು ಭಯೋತ್ಪಾದನೆಯಲ್ಲಿ ತೊಡಗಿದರು. ಪಂಜಾಬಿನಲ್ಲಿ ಕೊಲೆ, ಸುಲಿಗೆ ಮತ್ತು ಹಿಂಸಾಚಾರಗಳು ಮುಗಿಲು ಮುಟ್ಟಿದವು. ಕಾನೂನು, ಸುವ್ಯವಸ್ಥೆ ಹದಗೆಟ್ಟಿತು. ಹಿಂದೂಗಳು ತೀವ್ರ ಹಿಂಸೆಗೆ ಗುರಿಯಾದರು. ಸಿಖ್‌ರನ್ನು ಶಸ್ತ್ರಾಸ್ತ್ರಗಳನ್ನು ಒಪ್ಪಿಸಿ ಶರಣಾಗುವಂತೆ ಕೇಳಿದರೂ ಸಿಖ್‌ರು ಕೇಳಲಿಲ್ಲ. ವಿಧಿ ಇಲ್ಲದೆ ಇಂದಿರಾಗಾಂಧಿ ಆಪರೇಷನ್ ಬ್ಲೂಸ್ಟಾರ್ (ಜೂನ್ 2, 1984) ಕಾರ್ಯಾಚರಣೆಗೆ ಅನುಮತಿಸಿದರು. ತೀವ್ರಗಾಮಿಗಳು ಅಡಗಿಕೊಂಡಿದ್ದ ಅಮೃತಸರದ ಸುವರ್ಣ ದೇವಾಲಯದ ಮೇಲೆ ಕೈಗೊಂಡ ಸೈನಿಕ ಕಾರ್ಯಾಚರಣೆಯೇ ಆಪರೇಷನ್ ಬ್ಲೂಸ್ಟಾರ್. ಆಗ 325 ತೀವ್ರಗಾಮಿಗಳು

Scanned with CamScanner

ಶರಣಾಗದೆ ಹೋರಾಡಿ ಹುತಾತ್ಮರಾದರು. ಸೈನಿಕರು ಸ್ವರ್ಣ ದೇವಾಲಯದಲ್ಲಿದ್ದ ಅಪಾರ ಸಂಖ್ಯೆಯ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡರು. ಇದು ಸಿಖ್ ದೇವ ಮಂದಿರ ಅಖಾಲ್ ತಖ್ತ್‌ಗೆ ನಷ್ಟ ಉಂಟುಮಾಡಿತು. ಕಾರಣ ಪೊಲೀಸರು ಗುರುದ್ವಾರಗಳಿಗೆ ಪ್ರವೇಶಿಸುವಂತಿರಲಿಲ್ಲ. ಸೈನಿಕ ಕಾರ್ಯಾಚರಣೆಯಿಂದಾಗಿ ಸ್ವರ್ಣ ದೇವಾಲಯದ ಪಾವಿತ್ರ್ಯತೆಗೆ ಧಕ್ಕೆಯಾಗಿದೆ ಎಂದು ಭಾವಿಸಿದ ಸಿಖ್‌ರು ಪ್ರಧಾನಿಯನ್ನು ದ್ವೇಷಿಸಿದರು. ಕೊನೆಗೆ ಅದು ಇಂದಿರಾ ಕೊಲೆಯೊಂದಿಗೆ ಅಂತ್ಯಗೊಂಡಿತು.

### ಅಕ್ಟೋಬರ್ 31, 1984

ಆ ದಿನ ಇಡೀ ರಾಷ್ಟ್ರ ಶೋಕ ಸಾಗರದಲ್ಲಿ ಮುಳಗಿತು. ಜಗತ್ತು ಕಂಬನಿ ಇಟ್ಟಿತು. ರಾಷ್ಟ್ರವೇ ಸ್ತಬ್ಧವಾಯಿತು. ಅಂದು ಇಂದಿರಾರ ರಕ್ಷಣಾ ದಳದಲ್ಲಿದ್ದ ಬಿಯಾಂತ್ ಸಿಂಗ್ ಮತ್ತು ಸತ್ವಂತ್ ಸಿಂಗ್ ಗುಂಡುಹಾರಿಸಿ ಇಂದಿರಾಗಾಂಧಿಯನ್ನು ಕೊಲೆ ಮಾಡಿದ್ದರು. ಅವರಂತಹ ಚೈತನ್ಯಶೀಲ ನಾಯಕತ್ವ ರಾಷ್ಟ್ರಕ್ಕೆ ಬೇಕಿದ್ದಾಗಲೇ ಆದ ಈ ದುರಂತ ರಾಷ್ಟ್ರಕ್ಕೆ ಭರಿಸಲಾಗದ ನಷ್ಟವನ್ನುಂಟು ಮಾಡಿತು. ಅವರ ಅಂತ್ಯಕ್ರಿಯೆಯಲ್ಲಿ ಅನೇಕ ಜಗತ್ತಿನ ಗಣ್ಯರು ಭಾಗವಹಿಸಿದ್ದರು. ಇಂದಿರಾಗೆ ಬಿಬಿಸಿಯ ಮಹಿಳಾ ಮಿಲೆನಿಯಂ ಪ್ರಶಸ್ತಿ ದೊರೆತಿದೆ.

Scanned with CamScanner